# CORPORATE CORNER

## ಜೋಯಾಲುಕ್ಕಾಸ್‌ಗೆ ಪ್ರಶಸ್ತಿ



ರತ್ನದ ಹರಳು ಮತ್ತು ಆಭರಣ ವ್ಯಾಪಾರ ಮಂಡಳಿ ಮತ್ತು ರತ್ನದ ಹರಳು ಮತ್ತು ಆಭರಣ ರಫ್ತು ಉತ್ತೇಜಕ ಮಂಡಳಿ ಮುಂಬಯಿಯಲ್ಲಿ ಆಯೋಜಿಸಿದ್ದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಜೋಯಾಲುಕ್ಕಾಸ್ ಸಮೂಹದ ಅಧ್ಯಕ್ಷ ಮತ್ತು ಆಡಳಿತ ನಿರ್ದೇಶಕ ಜಾಯ್ ಆಲುಕ್ಕಾಸ್ ಅವರು ರತ್ನದ ಹರಳು ಮತ್ತು ಆಭರಣ ರಂಗದಲ್ಲಿ ನೀಡಿದ ವಿಶೇಷ ಕೊಡುಗೆಯನ್ನು ಪರಿಗಣಿಸಿ ಅವರಿಗೆ ರಿಟೈಲ್ ಜ್ಯುವೆಲ್ಲರ್ಸ್ ಇಂಡಿಯಾ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಮಂಡಳಿಯ ನಿರ್ದೇಶಕ ಶೈಲೇಶ್ ಸಂಗಾನಿ, ಜೋಯಾಲುಕ್ಕಾಸ್ ಸಮೂಹದ ಕಾರ್ಯನಿರ್ವಾಹಕ ನಿರ್ದೇಶಕ ಜಾನ್ ಪೌಲ್, ನಿರ್ದೇಶಕಿಯರಾದ ಜೊಲ್ಲಿ ಜಾಯ್ ಆಲುಕ್ಕಾಸ್, ಸೋನಿಯಾ ಜಾನ್ ಪೌಲ್ ಉಪಸ್ಥಿತರಿದ್ದರು.

## ಎಮಿರೇಟ್ಸ್ ವಿಶೇಷ ಕೊಡುಗೆ

ಎಮಿರೇಟ್ಸ್ ವಿಮಾನಯಾನ ಸಂಸ್ಥೆಯು ಹೆಚ್ಚಿನ ವಿದ್ಯಾಭ್ಯಾಸಕ್ಕೆಂದು ವಿದೇಶಕ್ಕೆ ತೆರಳುವ ಭಾರತೀಯ ವಿದ್ಯಾರ್ಥಿಗಳಿಗಾಗಿ ವಿಮಾನ ಪ್ರಯಾಣದ ಶುಲ್ಕದಲ್ಲಿ ವಿಶೇಷ ರಿಯಾಯಿತಿ ಪ್ರಕಟಿಸಿದೆ. ಯುರೋಪ್ ಮತ್ತು ಆಸ್ಟ್ರೇಲಿಯಾ ದೇಶಕ್ಕೆಂದು ಹೆಚ್ಚಿನ ವಿದ್ಯಾಭ್ಯಾಸಕ್ಕೆ ತೆರಳುವ ಭಾರತದ ವಿದ್ಯಾರ್ಥಿಗಳಿಗಾಗಿ ಈ ವಿಶೇಷ ರಿಯಾಯಿತಿ ಯೋಜನೆಯನ್ನು ಪ್ರಕಟಿಸಿದೆ. ಈ ಕೊಡುಗೆ ಆನ್‌ಲೈನ್ ಮೂಲಕ ಜೂ.25 ರಿಂದ ಸೆ. 30ರ ವರೆಗೆ ಇದೆ. ಇದರೊಂದಿಗೆ ಸುಮಾರು 10 ಕೆಜಿ ತೂಕದ ಹೆಚ್ಚಿನ ಸಾಮಗ್ರಿಗಳನ್ನು ಒಯ್ಯಲು ಸಹ ಅನುಮತಿ ಇದೆ. ಪ್ರಸ್ತುತ ಇರುವ ಸುಮಾರು 30 ಕೆಜಿ ತೂಕದ ಸಾಮಾನಿನ ಜತೆಗೆ ಈ ವಿಶೇಷ ಕೊಡುಗೆಯನ್ನು ಸಂಸ್ಥೆ ನೀಡಿದೆ. ಇದಲ್ಲದೆ ಅಮೆರಿಕ ದೇಶಕ್ಕೆ ತೆರಳುವಾಗ ಮುಂಗಡ ಟಿಕೆಟ್ ಬುಕ್ಕಿಂಗ್ ಸಮಯದಲ್ಲಿ ಶೇ. 10 ರಷ್ಟು ಹೆಚ್ಚಿನ ರಿಯಾಯಿತಿಯನ್ನು ಪಡೆಯುವ ಅವಕಾಶವಿದೆ. ಈ ಅವಕಾಶ ಜೂನ್ 25 ರಿಂದ ಅಕ್ಟೋಬರ್ 31ರ ವರೆಗೆ ಆಯ್ದ ನಗರಗಳಿಂದ ಲಭ್ಯವಿದೆ ಎಂದು ಎಮಿರೇಟ್ಸ್ ಏರ್‌ಲೈನ್ಸ್‌ನ ಭಾರತ ಮತ್ತು ನೇಪಾಳದ ಉಪಾಧ್ಯಕ್ಷ ಎಸ್ಸಾ ಸುಲೈಮಾನ್ ಅಹಮದ್ ತಿಳಿಸಿದ್ದಾರೆ.

## ಮಲಬಾರ್ ಗೋಲ್ಡ್‌ಗೆ ಪ್ರಶಸ್ತಿ

ಜ್ಯುವೆಲ್ಲರಿ ಮಾರುಕಟ್ಟೆಯಲ್ಲಿ ಗುರುತಿಸಿಕೊಂಡಿರುವ ಮಲಬಾರ್ ಗೋಲ್ಡ್ ಮತ್ತು ಡೈಮಂಡ್ಸ್ ಸಂಸ್ಥೆಯು ಈ ವರ್ಷದ ವಲಯ ರಿಟೈಲ್ ಚೈನ್ ಅವಾರ್ಡ್ ಪ್ರಶಸ್ತಿ ಪಡೆದುಕೊಂಡಿದೆ. ಮುಂಬಯಿಯಲ್ಲಿ ನಡೆದ ಸಮಾ ರಂಭದಲ್ಲಿ ಮಲಬಾರ್ ಸಮೂಹ ಸಂಸ್ಥೆಯ ಅಧ್ಯಕ್ಷ ಎಂ.ಪಿ. ಅಹ್ಮದ್ ಅವರು ಪ್ರಶಸ್ತಿಯನ್ನು ಪಡೆದು ಕೊಂಡರು. ಮಲಬಾರ್ ಗೋಲ್ಡ್ ಮತ್ತು ಡೈಮಂಡ್ಸ್ ಶೇ. 100 ಬಿಐಎಸ್ ಹಾಲ್‌ಮಾರ್ಕ್



ಚಿನ್ನವನ್ನು ಮಾರಾಟ ಮಾಡುತ್ತದೆ. ಐಜಿಐ ಪ್ರಮಾಣೀಕೃತ ವಜ್ರಾಭರಣ, ಪ್ಲಾಟಿನಂ ಗಿಲ್ಡ್ ಇಂಟರ್‌ನ್ಯಾಷನಲ್ (ಪಿಜಿಐ) ಪ್ರಮಾಣೀಕೃತ ಪ್ಲಾಟಿನಂ, ಹಾಲ್ ಮಾರ್ಕ್ ಸಿಲ್ವರ್ ಜ್ಯುವೆಲ್ಲರಿ, ಅಂತಾರಾಷ್ಟ್ರೀಯ ವಾರಂಟಿ ಹೊಂದಿರುವ ಪ್ಲಾಟಿನಂ ಬ್ರ್ಯಾಂಡೆಡ್ ವಾಚ್ ಮಳಿಗೆಯಲ್ಲಿ ಲಭ್ಯವಿದೆ.

## ರಾಯಾನ್ ಪಿಂಟೋಗೆ ಪ್ರಶಸ್ತಿ



ಪ್ರತಿಷ್ಠಿತ ರಾಯಾನ್ ಅಂತಾರಾಷ್ಟ್ರೀಯ ಸಮೂಹ ಸಂಸ್ಥೆಗಳ ಸಿಇಒ ರಾಯಾನ್ ಪಿಂಟೋ ಅವರಿಗೆ 'ಏಷ್ಯಾದ ಉದಯೋನ್ಮುಖ ಬಿಸಿನೆಸ್ ಲೀಡರ್ 2013-14' ಎಂಬ ಪ್ರಶಸ್ತಿ ದೊರೆತಿದೆ. ಗ್ಲೋಬಲ್ ಇಂಡಿಯನ್ ಎಕ್ಸಲೆನ್ಸ್ ಸಮಿತಿಯು ಲಂಡನ್‌ನಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಇಂಗ್ಲೆಂಡ್ ಸಂಸದೆ ಪ್ರೀತಿ ಪಾಟೀಲ್ ಹಾಗೂ ಲಾರ್ಡ್ ಸ್ವರಾಜ್ ಪೌಲ್ ಪ್ರಶಸ್ತಿ ನೀಡಿ ಗೌರವಿಸಿದರು. ಇದೇ ಸಮಾರಂಭದಲ್ಲಿ ರಾಯಾನ್ ಅಂತಾರಾಷ್ಟ್ರೀಯ ಸಮೂಹ ಸಂಸ್ಥೆಗೆ 'ಭಾರತದ ಹೆಚ್ಚು ಪರಿಣಾಮಕಾರಿ ಸಂಸ್ಥೆ 2013-2014' ಪ್ರಶಸ್ತಿಯನ್ನೂ ಪ್ರದಾನ ಮಾಡಿ ಗೌರವಿಸಲಾಯಿತು. ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಗೌರವ ಸ್ವೀಕರಿಸಿ ಮಾತನಾಡಿದ ರಾಯಾನ್ ಪಿಂಟೋ 'ದೇವರ ಅನುಗ್ರಹ ಮತ್ತು ಸಂಸ್ಥೆಯ ಸ್ಥಾಪಕಾಧ್ಯಕ್ಷ ಡಾ. ಆಗಸ್ಟಿನ್ ಎಫ್. ಪಿಂಟೋ, ವ್ಯವಸ್ಥಾಪಕ ನಿರ್ದೇಶಕಿ ಮೇಡಂ ಗ್ರೇಸ್ ಪಿಂಟೋ, ಸಂಸ್ಥೆಯ ಪರಿವಾರ ಸದಸ್ಯರ ಕಠಿಣ ಪರಿಶ್ರಮದಿಂದ ನಾನು ಈ ಗುರುತಿಸುವಿಕೆಗೆ ಆಯ್ಕೆಯಾಗಿದ್ದೇನೆ ಎಂದಿದ್ದಾರೆ.

## ಕೃಷ್ಣ ಕುಮಾರ್‌ಗೆ ಪ್ರಶಸ್ತಿ



ಪೂನಾ ಮರ್ಚೆಂಟ್ಸ್ ಚೇಂಬರ್ ನೀಡುವ ಆದರ್ಶ ವ್ಯಾಪಾರಿ ಉತ್ತಮ್ ಪುರಸ್ಕಾರ್ ಪ್ರಶಸ್ತಿಯನ್ನು ಕಾಸ್ಮೋಸ್ ಬ್ಯಾಂಕ್ ಅಧ್ಯಕ್ಷ ಕೃಷ್ಣ ಕುಮಾರ್ ಗೋಯಲ್ ಪಡೆದುಕೊಂಡಿದ್ದಾರೆ. ಮಹಾರಾಷ್ಟ್ರ ಬಿಜೆಪಿ ಅಧ್ಯಕ್ಷ ದೇವೇಂದ್ರ ಪದನಿವಾಸ್ ಅವರು ಪ್ರಶಸ್ತಿ ಪ್ರಧಾನ ಮಾಡಿದರು. ವ್ಯವಹಾರ ಕ್ಷೇತ್ರದಲ್ಲಿ ಮಾಡಿ ರುವ ಅಭೂತಪೂರ್ವ ಸಾಧನೆಗಾಗಿ ದಿ. ಉತ್ತಮ್‌ಚಂದ್‌ಜಿ ಹೆಸರಿನಲ್ಲಿ ಪ್ರಶಸ್ತಿ ನೀಡಲಾಗುತ್ತಿದೆ.

## ಎಸಿಟಿ ಫೈಬರ್‌ನೆಟ್ ಸೇವೆ

ಇಂಟರ್‌ನೆಟ್ ಸೇವೆ ಒದಗಿಸುವ ಏಟ್ರಿಯಾ ಕನ್ವರ್ಜೆನ್ಸ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯು ಇದೀಗ ಹೊಸ ಬ್ರಾಡ್‌ಬ್ರ್ಯಾಂಡ್ ಸೇವೆ ಎಸಿಟಿ ಫೈಬರ್‌ನೆಟ್‌ನ್ನು ಬೆಂಗಳೂರಿನಲ್ಲಿ ಆರಂಭಿಸಿದೆ.

ಎಸಿಟಿಯು ಇದೀಗ 60 ಎಂಬಿಪಿಎಸ್ ಯೋಜನೆ ಆರಂಭದೊಂದಿಗೆ ಎಸಿಟಿ ಫೈಬರ್‌ನೆಟ್‌ನ ಮೂಲಕ ಗ್ರಾಹಕರಿಗೆ ಅತ್ಯಂತ ವೇಗವಾದ, ಸ್ಥಿರ ಮತ್ತು ಸರಿಸಾಟಿಯಿಲ್ಲದ ಇಂಟರ್‌ನೆಟ್ ಸೌಲಭ್ಯ ಸಿಗಲಿದೆ. ಈ ಸಂದರ್ಭದಲ್ಲಿ ಮಾತನಾಡಿದ ಎಸಿಟಿ ಗ್ರೂಪ್‌ನ ಸಿಇಒ ಬಾಲ ಮಾಲಾಡಿ, ಎಸಿಟಿಯು ಭಾರತೀಯ ಇಂಟರ್ನೆಟ್ ಬಳಕೆಯಲ್ಲಿ ಮುಂಚೂಣಿಯಲ್ಲಿದೆ. ಮಾರುಕಟ್ಟೆ ನಿರಂತರವಾಗಿ ಬೆಳೆಯುತ್ತಿದೆ. ಎಸಿಟಿ ಅತ್ಯಂತ ವೇಗದ ಅಂತರ್ಜಾಲ ಸೌಲಭ್ಯದಿಂದಾಗಿ ಇದು ಬಳಕೆದಾರರ ಅನುಭವವನ್ನೇ ಬದಲಾಯಿ ಸುತ್ತದೆ. ಮುಂದಿನ 18 ತಿಂಗಳಿನಲ್ಲಿ ಕಂಪನಿ ಒಂದು ಮಿಲಿಯನ್ ಗ್ರಾಹಕರನ್ನು ಸಂಪರ್ಕಿಸುವ ಗುರಿ ಹಾಕಿಕೊಂಡಿದೆ. ಈ ನಿಟ್ಟಿನಲ್ಲಿ ಸಂಸ್ಥೆಯು ಹೂಡಿಕೆ ಮಾಡಲಿದೆ ಎಂದರು.

## ನಿಟ್ಟೆ ವಿವಿ: ಇಂದ್ರಾಣಿ ನೇಮಕ



ನಿಟ್ಟೆ ವಿಶ್ವವಿದ್ಯಾನಿಲಯ ಅಂತರ್ ವಿಭಾಗೀಯ ಸಂಶೋಧನಾ ಕೇಂದ್ರ ಆರಂಭಿಸಿದ್ದು, ಪ್ರೊ. ಇಂದ್ರಾಣಿ ಕರುಣಾ ಸಾಗರ್ ಅವರು ನಿರ್ದೇಶಕರಾಗಿ ನೇಮಕಗೊಂಡಿದ್ದಾರೆ. ಬಯೋ ಮೆಡಿಕಲ್ ಶಿಕ್ಷಣ ಮತ್ತು ಸಂಶೋಧನೆಯಲ್ಲಿ ಪ್ರೊ. ಇಂದ್ರಾಣಿ ಕರುಣಾ ಸಾಗರ್ ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧರಾಗಿದ್ದು, 'ನಿಟ್ಟೆ ವಿ.ವಿ. ವಿಜ್ಞಾನ ಶಿಕ್ಷಣ ಮತ್ತು ಸಂಶೋಧನಾ ಕೇಂದ್ರ' (ಎನ್‌ಯುಸಿಎಸ್ ಆರ್)ದ ಮುಖ್ಯಸ್ಥರೂ ಆಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

## ಕೆನರಾ ಬ್ಯಾಂಕ್‌ಗೆ ಲಾಭ




ಸಾರ್ವಜನಿಕ ರಂಗದ ಕೆನರಾ ಬ್ಯಾಂಕ್ ಪ್ರಸ್ತುತ ಹಣಕಾಸು ವರ್ಷದ ಮೊದಲ ಮೂರು ತಿಂಗಳಿನಲ್ಲಿ 807 ಕೋಟಿ ರೂ. ನಿವ್ವಳ ಲಾಭ ಗಳಿಸಿದೆ. ಮೊದಲ ಹಣಕಾಸು ವರ್ಷದಲ್ಲಿ ದಾಖಲೆ ಎಂಬಂತೆ 2,019 ಕೋಟಿ ರೂ. ರಿಕವರಿ ಮಾಡಿದೆ. ಒಟ್ಟು ಅನುತ್ಪಾದಕ ಸೊತ್ತಿನ ಪ್ರಮಾಣ ಶೇ. 2.91ರಿಂದ ಶೇ. 2.67ಕ್ಕೆ ಇಳಿದಿದೆ. ನಿವ್ವಳ ಅನುತ್ಪಾದಕ ಸೊತ್ತಿನ ಪ್ರಮಾಣವು ಶೇ. 2.48ರಿಂದ ಶೇ. 2.03ಕ್ಕೆ ಇಳಿದಿದೆ. ಬ್ಯಾಂಕ್‌ನ ಒಟ್ಟು ವ್ಯವಹಾರ 7.32 ಲಕ್ಷ ಕೋಟಿ ರೂ., ಠೇವಣಿ 4.29 ಲಕ್ಷ ಕೋಟಿ ರೂ.ಗೆ ಹಾಗೂ ಮುಂಗಡ 3.03 ಲಕ್ಷ ಕೋಟಿ ರೂ.ಗೆ ಏರಿದೆ.



**ವಿತ್ತೀಯ ಸೇರ್ಪಡೆ ಯೋಜನೆ ಕುರಿತು ಪರಾಮರ್ಶೆ ನಡೆಸಲು ಮಂಡ್ಯ ಜಿಲ್ಲೆಯ ಲೀಡ್ ಬ್ಯಾಂಕ್ ಆಗಿರುವ ವಿಜಯ ಬ್ಯಾಂಕ್‌ನ ಅಧ್ಯಕ್ಷ ವಿ. ಕಣ್ಣನ್ ಅವರು ಭೇಟಿ ನೀಡಿ ಪರಿಶೀಲನೆ ನಡೆಸಿದರು.**